

ಮಳೆ ಜೋರಾದಾಗ ಪಯಣಿಸಿದ ಹರಿಗೋಲನ್ನೇ ತಲೆಕೆಳಗಾಗಿಸಿದರೆ ಆಶ್ರಯ ಸಿದ್ಧ.

ಆಕರ್ಷಣೀಯವಾದ ಕಾವೇರಿಯಲ್ಲಿ ಎಲ್ಲೆಂದರಲ್ಲಿ ಇಳಿದೀರ ಜೋಕೆ! ಮೊಸಳೆಗಳ ಕಾಟ, ನೀರಿಗಿಳಿಯುವಾಗ, ಕಾಡೊಳಗೆ ಹೋಗುವಾಗ, ಟ್ರೆಕ್ಕಿಂಗ್‌ನಲ್ಲಿ ಯಾರಾದರೂ ಜತೆಯಲ್ಲಿರಲಿ. ಇದೆಲ್ಲ ಯಾಕೆ? ಅಂತೀರಾ... ಡೇರೆಯ ಮುಂದೆ ಕುರ್ಚಿ ಹಾಕಿ ಅಥವಾ ಹಗ್ಗದ ಮಂಚದ ಮೇಲೆ ಮೈಚೆಲ್ಲಿ ನದಿ, ಬೆಟ್ಟವನ್ನು ನೋಡುತ್ತಾ ಪ್ರಪಂಚವನ್ನೇ ಮರೆಯಬಹುದು.

**ಒಂದೆರಡು ದಿನ ತಂಗಬಹುದಾದ ವಿಶ್ರಾಂತಿಯ ಸ್ಥಳವಿದು. ದಿನವೊಂದಕ್ಕೆ ಊಟ ವಸತಿ ಟ್ರೆಕ್ಕಿಂಗ್ ಫಿಷಿಂಗ್ ಎಲ್ಲ ಸೇರಿ ಒಬ್ಬರಿಗೆ 2250 ರೂಪಾಯಿ.**

ಯಾವ ಡೇರೆಗೂ ಬೀಗ ಹಾಕುವ ಅವಶ್ಯಕತೆ ಇಲ್ಲ. ಅಷ್ಟು ಸುರಕ್ಷತೆಯನ್ನು ಇಲ್ಲಿಯ ಸಿಬ್ಬಂದಿ ನಿಮಗೆ ಒದಗಿಸುತ್ತಾರೆ.

ಗ್ಯಾಲಿಬೋರ್‌ನ ವಿಶೇಷವೆಂದರೆ ಇಲ್ಲಿ ವಿದ್ಯುತ್ ಸೌಕರ್ಯವಿಲ್ಲ. ಸಾಯಂಕಾಲ ಆಯಿತೆಂದರೆ ದಟ್ಟ ಅರಣ್ಯದ ಮಧ್ಯೆ ಸುತ್ತಲೂ ಕವಿಯುತ್ತಾ ಬರುವ ಕತ್ತಲಲ್ಲಿ ಒಬ್ಬರ ಮುಖ ಒಬ್ಬರು ನೋಡಲೂ ಪ್ರಯಾಸ ಪಡಬೇಕಾಗುತ್ತದೆ. ಎಲ್ಲ ಡೇರೆಗಳ ಮುಂಭಾಗ ಹಾಗೂ ಹಿಂಭಾಗದಲ್ಲಿ ಲಾಂದ್ರಗಳನ್ನು ಹಚ್ಚಲಾಗುತ್ತದೆ. ಮಿಣುಕು ಬೆಳಕು ಬೀರುತ್ತಾ ಸಾಲಾಗಿ ಉರಿಯುತ್ತಿರುವ ಲಾಂದ್ರಗಳು, ಕತ್ತಲನ್ನು ಓಡಿಸಲು ವ್ಯರ್ಥ ಪ್ರಯತ್ನ ಮಾಡುತ್ತವೆ. ರಭಸವಾಗಿ ಗಾಳಿ ಬೀಸತೊಡಗಿದರೆ 'ದೀಪವು ನಿನ್ನದೇ... ಗಾಳಿಯು ನಿನ್ನದೇ... ಆರದಿರಲಿ ಬೆಳಕು' (ಬದುಕು?) ಎಂದು ಹಾರೈಸುತ್ತಾ, ಟಾರ್ಚ್ ತೊಗೊಂಡು ಒಬ್ಬರ ಕೈ ಒಬ್ಬರು ಹಿಡಿದು ತಡವರಿಸುತ್ತಾ, ಸ್ವಲ್ಪ ಹೆದರಿಕೆ, ಸ್ವಲ್ಪ ಥ್ರಿಲ್‌ನೊಂದಿಗೆ ಹೆಜ್ಜೆ ಹಾಕಿದರೆ ಅದರ ಮಜವೇ ಬೇರೆ.

ಕತ್ತಲಲ್ಲಿ ಬೋರ್ ಆಗಲು ಶುರುವಾಯಿತೇ? ಈ ಬೇಸರ ಕಳೆಯಲೆಂದೇ ರಾತ್ರಿ ಕ್ಯಾಂಪ್ ಫೈರ್ ನಡೆಸಲಾಗುತ್ತದೆ. ತುಂತುರು ಮಳೆಯಲ್ಲಿ, ನಡುಗಿಸುವ ಚಳಿಯಲ್ಲಿ, ದೊಡ್ಡ ದೊಡ್ಡ ಮರದ ದಿಮ್ಮಿಗಳಿಂದ ಹೊಮ್ಮುವ ಶಾಖ ಮತ್ತು ಬೆಳಕು ನವ ಚೈತನ್ಯವನ್ನು ತುಂಬುತ್ತದೆ. ಮುಂದೆ ನಿಮ್ಮ ಇಷ್ಟ. ಹಾಡು, ಕುಣಿತ, ಕುಳಿತೆಡೆಗೇ ಸರಬರಾಜಾಗುವ ಊಟವೂ ಅಚ್ಚುಕಟ್ಟು. ಮಾಂಸಾಹಾರಿಗಳಾದರೆ ಮೊದಲೇ ತಿಳಿಸಿದ್ದರೆ ಬಾಯಲ್ಲಿ ನೀರೂರಿಸುವ ಖಾದ್ಯ ಲಭ್ಯ. ಇಷ್ಟಿದ್ದರೂ ಅಬ್ಬರಿಸುವ ಟೇಪ್‌ರೆಕಾರ್ಡರ್ ಹಾಗೂ ಸಂಗೀತ ವಾದ್ಯಗಳ ಬಳಕೆ ನಿಷಿದ್ಧ. ಶಬ್ದ ಮಾಲಿನ್ಯದಿಂದ ಇಲ್ಲಿನ ಪಶುಪಕ್ಷಿಗಳ ಏಕಾಂತಕ್ಕೆ ಭಂಗ ಬಾರದಿರಲೆಂದು ಈ ಮುನ್ನೆಚ್ಚರಿಕೆ.

ಹಾಂ! ಇನ್ನೊಂದು ವಿಶೇಷವೂ ಇಲ್ಲುಂಟು, ಇಲ್ಲಿ ಯಾವ ಮೊಬೈಲೂ ಕೆಲಸ ಮಾಡುವುದಿಲ್ಲ. ವಿದ್ಯುತ್ ಇಲ್ಲ, ಟಿ.ವಿ. ಇಲ್ಲ, ಮೊಬೈಲ್ ಇಲ್ಲ. ಒಮ್ಮೆ ಇಲ್ಲಿ ಬಂದು ಸೇರಿದರೆಂದರೆ ನಗರದಿಂದ ಪ್ರತ್ಯೇಕವಾದ ಬೇರೆಯೇ ಒಂದು ಜಗತ್ತನ್ನು ಸೇರಿದಂತೆ. ಆದರೆ ಹೊರ ಜಗತ್ತನ್ನು ಸಂಪರ್ಕಿಸಲು ಕಛೇರಿಯಲ್ಲಿ ಎಸ್.ಟಿ.ಡಿ. ಸೌಲಭ್ಯ ಉಂಟು.

ನಗರ ಜೀವನದ ಜಂಜಾಟದಿಂದ ಮುಕ್ತರಾಗಿ, ಎಲ್ಲ ಮರೆತು ಹಾಯಾಗಿ ಎರಡು ದಿನ ವಿಹರಿಸಲು ಗಾಳಿಬೋರೆ ಹೇಳಿ ಮಾಡಿಸಿದ ಜಾಗ. ಗಂಟೆಗಟ್ಟಲೆ ಕುಳಿತು ಮೀನು ಹಿಡಿಯಬಹುದು. ದಟ್ಟ ಅರಣ್ಯದಲ್ಲಿ ಓಡಾಡಬಹುದು. ಬೆಟ್ಟ ಏರಬಹುದು. ನದಿಯನ್ನು ಮಿಂದೇಳಬಹುದು. ತೆಪ್ಪದಲ್ಲಿ ವಿಹರಿಸಬಹುದು.

ಹಾಗೆಂದು ಆಕರ್ಷಣೀಯವಾದ ಕಾವೇರಿಯಲ್ಲಿ ಎಲ್ಲೆಂದರಲ್ಲಿ ಇಳಿದೀರ ಜೋಕೆ! ಮೊಸಳೆಗಳ ಕಾಟ, ನೀರಿಗಿಳಿಯುವಾಗ, ಕಾಡೊಳಗೆ ಹೋಗುವಾಗ, ಟ್ರೆಕ್ಕಿಂಗ್‌ನಲ್ಲಿ ಜೊತೆಗೇ ಹೋಗಿ. ಏನೂ ಬೇಡವೇ? ಡೇರೆಯ ಮುಂದೆ ಕುರ್ಚಿ ಹಾಕಿ ಅಥವಾ ಹಗ್ಗದ ಮಂಚದ ಮೇಲೆ ಮೈಚೆಲ್ಲಿ ನದಿ, ಬೆಟ್ಟವನ್ನು ನೋಡುತ್ತಾ ಪ್ರಪಂಚವನ್ನೇ ಮರೆಯಬಹುದು.

ಒಂದು ಅಥವಾ ಎರಡು ದಿನ ತಂಗಬಹುದಾದ ವಿಶ್ರಾಂತಿಯ ಸ್ಥಳವಿದು. ದಿನವೊಂದಕ್ಕೆ ಊಟ ವಸತಿ ಟ್ರೆಕ್ಕಿಂಗ್ ಫಿಷಿಂಗ್ ಎಲ್ಲ ಸೇರಿ ಒಬ್ಬರಿಗೆ 2250 ರೂಪಾಯಿ.

ರಜಾ ದಿನಗಳಲ್ಲಿ, ಬೇಸಿಗೆ ಕಾಲದಲ್ಲಿ ಇಲ್ಲಿ ವಿಪರೀತ ಪ್ರವಾಸಿಗರಿರುವುದರಿಂದ, ನೀವು ಮುಂಚೇನೇ ರಿಸರ್ವೇಷನ್ ಮಾಡಿಸಿಕೊಳ್ಳಬೇಕು. ಬೆಂಗಳೂರಿನ (ದೂರವಾಣಿ 25597024/25) ಇಲ್ಲಿ ಮಾಹಿತಿ ಪಡೆದು ಕಾಟೇಜ್ ಕಾಯ್ದಿರಿಸಿಕೊಂಡರೆ ನಿಮ್ಮ ಪ್ರವಾಸ ಹಿತಕರ.

ಸಂಗಮದಿಂದ ಕೇವಲ ನಾಲ್ಕು ಕಿ.ಮೀ. ದೂರದಲ್ಲಿ ಇನ್ನೊಂದು ಪ್ರಸಿದ್ಧ ಪ್ರವಾಸಿ ತಾಣ ಮೇಕೆದಾಟು ಇದೆ. ವಾಪಸ್ಸು ಬರುವಾಗ ಅಲ್ಲಿಗೂ ಭೇಟಿ ನೀಡಬಹುದು.